ಪಿ .ಡಬ್ಲ್ಯೂ-1

ದಿನಾಂಕ 15-01-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಎದುರುದಾರನ ಪರ ಶ್ರೀ ಎ ಜೆ ವಿ ವಕೀಲರಿಂದಃ-**

ನನ್ನ ಮತ್ತು ಎದುರುದಾರನ ಮದುವೆ ರಾಂಪೂರ ದಲ್ಲಿ ಸುಮಾರು 10-15 ವರ್ಷಗಳ ಹಿಂದೆ ಆಗಿರುತ್ತದೆ. ನಮಗೆ ಮೂರು ಜನ ಮಕ್ಕಳಿದ್ದಾರೆ. ಅವರ ಹೆಸರು ವಿನಯ, ಶ್ರೀಯಾ (ಪ್ರಿಯಾ) , ಮತ್ತು ಪೂಜಾ. ವಿನಯ ಇವರಿಗೆ ಅಂದಾಜು 15 ವರ್ಷಗಳು ಆಗಿರಬಹುದು. ಶ್ರೀಯಾ ಇವರಿಗೆ ಅಂದಾಜು 16 ವರ್ಷಗಳು ಆಗಿರಬಹುದು. ಪೂಜಾ ಇವರಿಗೆ ಅಂದಾಜು 16 ವರ್ಷಗಳು ಆಗಿರಬಹುದು. ವಿನಯ ಮತ್ತು ಶ್ರೀಯಾ ನನ್ನ ಗಂಡನ ಜೊತೆ ವಾಸವಿರುತ್ತಾರೆ. ಪೂಜಾ ಇವರು ನನ್ನ ಜೊತೆ ವಾಸವಿದ್ದಾರೆ. ಪೂಜಾನ್ನು ಒತ್ತಾರಯ ಪೂರ್ವಕವಾಗಿ ನನ್ನ ಜೊತೆ ಇಟ್ಟುಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ಗಂಡನೊಂದಿಗೆ ಯಾವ ಕಾಲಕ್ಕೂ ಹೊಂದಾಣಿಕೆ ಮಾಡಿಕೊಳ್ಳದೇ ನನ್ನ ಅತ್ತೆ ಮತ್ತು ಗಂಡನಿಗೆ ಹೊಡೆ ಬಡೆ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರನು ಬನಹಟ್ಟಿಯಲ್ಲಿ ಖಾನಾವಳಿಯನ್ನು ನಡೆಸುತ್ತಿದ್ದು ಅದರಲ ಹೆಸರು ಹೇಳಲು ಬರುವುದಿಲ್ಲ. ಅವರು ಸ್ವಂತವಾಗಿ ಅದನ್ನು ರಾಂಪೂರದಲ್ಲಿ ನಡೆಸುತ್ತಿದ್ದಾರೆ. ಜಾಗದ ನಂ. ನನಗೆ ಹೇಳಲು ಬರುವುದಿಲ್ಲ. ಎದುರುದಾರನು ಸ್ವಂತವಾಗಿ ಖಾನಾವಳಿಯನ್ನು ರಂಪೂರ ಮತ್ತು ಬನಹಟ್ಟಿ ಯಲ್ಲಿ ನಡೆಸುತ್ತಿದ್ದಾರೆಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ಅವರು ತಳ್ಳುವ ಗಾಡಿಯಲ್ಲಿ ಟೀಯನ್ನು ಮಾರಾಟ ಮಾಡುತ್ತಾರೆ ಎಂದರೆ ಸರಿಯಲ್ಲ.

ಎದುರುದಾರನಿಗೆ ದಿನದ ಉತ್ಪನ್ನ ಅಂದಾಜು 10,000/- ಇರುತ್ತದೆ. ಹಿಗೆಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ಆತನಿಗೆ ದಿನವೂ 100-150 ರೂ. ಸಂಪಾದನೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಐಶಾರಾಮಿ ಜೀವನ ನಡೆಸಲು ಯಾವಾಗಲೂ ನನ್ನ ಗಂಡನಿಂದ ಹಣವನ್ನು ಕೇಳುತ್ತಿದ್ದೆನು ಎಂದರೆ ಸರಿಯಲ್ಲ. ಪೂಜಾ ಇವರು ಶಾಲೆ ಬಿಟ್ಟು ಕಂಪ್ಯೂಟರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಳೆ. ನಾನು ಮನೆಕೆಲಸ ಮಾಡುತ್ತಿದ್ದು, ತಿಂಗಳಿಗೆ 1000/- ರೂ ಬರುತ್ತದೆ. ನಾನು ಭದ್ರನ್ನವರ ಇವರ ಮನೆಯಲ್ಲಿ ಮನೆಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ. 10,000/- ಸಂಬಳ ಬರುತ್ತಿದ್ದು ನನ್ನ ಮಗಳಿಗೆ ತಿಂಗಳಿಗೆ ರೂ. 5000/- ಸಂಬಳ ಬರುತ್ತದೆ ಎಂದರೆ ಸರಿಯಲ್ಲ. ಹಣವನ್ನು ಕೊಡದೇ ಇದ್ದರೆ ನನ್ನ ಗಂಡನ ಹೆಸರನ್ನು ಚೀಟಿಯಲ್ಲಿ ಬರೆದು ಸಾಯುತ್ತಿದ್ದೇನೆಂದು ಅವರಿಗೆ ಮಾನಸಿಕ ತೊದರೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೆ ನನ್ನನ್ನು ಸುಟ್ಟಿರುತ್ತಾರೆ. ನಾನೇ ಅವರಿಗೆ ಬೆದರಿಕೆ ಹಾಕಲು ಸೀಮೆ ಎಣ್ಣೆ ಸುರಿದುಕೊಂಡು ಹೋಗಿ ದ್ದಾಗ ಅದು ನಿಜವಾಗಲು ಬೆಂಕಿ ಹತ್ತಿರುತ್ತದೆ ಎಂದರೆ ಸರಿಯಲ್ಲ. ನಂತರ ನನ್ನ ಗಂಡ ಮತ್ತು ಮಕ್ಕಳು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದರಿಂದ ನಾನು ಉಳಿದಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆ ತಾಯಿ ನೋಡಿಕೊಂಡಿರುತ್ತಾರೆ. ಆಗ ಅವರು ನನಗೆ ಉಪಚಾರ ಮಾಡಿದ ಕಾರಣ ಮತ್ತು ನನ್ನದೇ ತಪ್ಪು ಇರುವ ಕಾರಣ ನಾನು ಪೋಲಿಸರಿಗೆ ದೂರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮದುವೆ ಆದಾಗಿನಿಂದ ಇಲ್ಲಿಯವರೆಗೂ ರಾಂಪೂರದಲ್ಲಿರುವ ನನ್ನ ಗಂಡನ ಮನೆಯಲ್ಲಿ ವಾಸವಿರುತ್ತೇನೆಂದರೆ ಸರಿ. ನಾನು ಎದುರುದಾರನಿಗೆ ತೊಂದರೆ ಕೊಡುತ್ತಿರುವ ಕಾರಣ ಅವರು ಬನಹಟ್ಟಿಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ವಿವಾಹ ವಿಚ್ಚೇದನ ಕೋರಿ ಎಮ ಸಿ ನಂ. 12/2016 ನ್ನು ದಾಖಲು ಮಾಡಿದ್ದು ದಿಃ 04.08.2018 ರಂದು ನಮ್ಮ ವಿವಾಹವನ್ನು ರದ್ದು ಮಾಡಿ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಆದೇಶ ಉಚ್ಚ ನ್ಯಾಯಾಲಯದಲ್ಲಿ ತಡೆ ಆಜ್ಞೆ ಇರುತ್ತದೆ. ತಡೆಯಾಜ್ಞೆಯ ಆದೇಶ ಪ್ರತಿಯನ್ನು ನಾನು ಹಾಜರುಮಾಡಿರುತ್ತೇನೆ. ರಾಂಪೂರದ ಸಿ ಟಿ ಎಸ ನಂ. 4863/ಎ 2 /176/1 ಇದು ನನ್ನ ಅತ್ತೆಯ ಸ್ವಂತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅದು ಹಿರಿಯರ ಆಸ್ತಿ ಇರುತ್ತದೆ. ಸದರಿ ಆಸ್ತಿ ನನ್ನ ಅತ್ತೆಯ ಹೆಸರಿನಲ್ಲಿ ಇದೆ ಎಂದರೆ ಸರಿ. ನನ್ನ ಅತ್ತೆ ಸ್ವಂತ ಗಳಿಸಿದ ಹಣದಿಂದ ಕಾರಬಾರಿ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಿವಾಹ ವಿಚ್ಚೇದನ ಆದೇಶ ವಾದ ನಂತರ ಪೂಜಾ ಸಲುವಾಗಿ ಎದುರುದಾರನು ನನ್ನನ್ನು ತನ್ನ ಜೊತೆ ಇಟ್ಟುಕೊಂಡು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.